# ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ಸಂಖ್ಯೆ 25/2021

ಚಾಸಾ 3 ಫ್ರಾಸಾ 2

| | | |
|---|---|---|
| ಸಾಕ್ಷಿಯ ಹೆಸರು | : | ಸುಜನ್ ರಾಜ್.ಎನ್. |
| ತಂದೆಯ ಹೆಸರು | : | ಲೇಟ್ ನಟರಾಜು |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಅಬಕಾರಿ ಪೇದೆ |
| ವಾಸ ಸ್ಥಳ | : | ಚಾಮರಾಜನಗರ |

ದಿನಾಂಕ 09.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ನಾನು 2019 ಅಕ್ಟೋಬರ್ ನಿಂದ ಜುಲೈ 2025 ರವರೆಗೆ ಕೊಳ್ಳೇಗಾಲ ವಲಯ ಕಚೇರಿಯಲ್ಲಿ ಅಬಕಾರಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25.04.2020 ರಂದು ಕೋವಿಡ್ –19 ಕರ್ತವ್ಯ ಸಂಬಂಧ ಅಬಕಾರಿ ಉಪ ಆಯುಕ್ತರು, ಚಾಮರಾಜನಗರ ರವರ ಆದೇಶದ ಮೇರೆಗೆ, ಚಾಸಾ–1, 2,4 ಮತ್ತು ನಾನು ಇಲಾಖಾ ವಾಹನ ಕೆಎ–10–ಜಿ–0636 ಮಹೇಂದ್ರ ಬುಲೆರೋ ವಾಹನದಲ್ಲಿ ಹನೂರು ತಾಲ್ಲೂಕಿನ ಶಾಗ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ, ಸಂಜೆ 6.50 ಗಂಟೆ ಸಮಯದಲ್ಲಿ ಚಾಸಾ–1 ರವರಿಗೆ ಪುಷ್ಪಾಪುರ ಗ್ರಾಮದ ಮಾದೇವಿ ಕೋಂ ಮುನಿಯ ಎಂಬುವವರು ಅಕ್ರಮವಾಗಿ ಕಳ್ಳಭಟ್ಟಿ ತಯಾರಿಸುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಅದರಂತೆ ನಾವು ಸದರಿ ವಿಳಾಸಕ್ಕೆ ತೆರಳಿ ನಾವು ಮನೆಯ ಬಳಿ ಹೋದಾಗ ಮನೆಯ ಒಳಗಿನಿಂದ ಒಬ್ಬ ಮಹಿಳೆ ಹೊರಗಡೆ ಬಂದಿದ್ದು, ನಾವುಗಳು ಆಕೆಯ ಹೆಸರನ್ನು ಕೇಳಲಾಗಿ ಆಕೆ ತಮ್ಮ ಹೆಸರು ಮಾದೇವಿ ಕೋಂ ಮುನಿಯ ಎಂದು ತಿಳಿಸಿರುತ್ತಾರೆ. ಭಾತ್ಮೀಯ ಮಾಹಿತಿ ಖಚಿತವಾದ್ದರಿಂದ ನಾವು ಸದರಿ ಮಹಿಳೆಗೆ ನಾವು ಬಂದಿರುವ ವಿಚಾರ ತಿಳಿಸಿ ಮನೆ ಶೋಧನೆ ಮಾಡುತ್ತೇವೆ ಎಂದು ತಿಳಿಸಿರುತ್ತೇವೆ ನಂತರ ಸ್ಥಳದಲ್ಲಿ ಸಾರ್ವಜನಿಕರನ್ನು ಪಂಚರಾಗಲು ಕೋರಿಕೊಂಡಿದ್ದು, ಸ್ಥಳದಲ್ಲಿ ಸಾರ್ವಜನಿಕರು ಪಂಚರಾಗಲು ನಿರಾಕರಿಸಿರುತ್ತಾರೆ. ನಂತರ ಇಲಾಖಾ ಸಿಬ್ಬಂದಿಗಳನ್ನು ಪಂಚರಾಗಿ ನೇಮಿಸಿಕೊಂಡು ಶೋಧನಾ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಚಾಸಾ–1 ರವರು ಶೋಧನಾ ವರದಿ ತಯಾರಿಸಿ ನಾವುಗಳು ಪರಸ್ಪರ ಅಂಗಶೋಧನೆ ಮಾಡಿಕೊಂಡಿರುತ್ತೇವೆ.

ನಂತರ ಸದರಿ ಮನೆ ಹಾಗೂ ಮನೆಗೆ ಹೊಂದಿಕೊಂಡಿದ್ದ ಶೌಚಾಲಯವನ್ನು ಪರಿಶೀಲಿಸಲಾಗಿ, ಶೌಚಾಲಯದ ಒಳಗೆ ಒಂದು ಹೊಲೆಯ ಮೇಲೆ 3 ಪಾತ್ರೆಗಳನ್ನು ಒಂದರ ಮೇಲೆ ಒಂದು ಇಟ್ಟು ಕಳ್ಳಭಟ್ಟಿ ಕಾಯಿಸುತ್ತಿರುವುದು ಕಂಡುಬಂದಿರುತ್ತದೆ. ನಂತರ ಅವುಗಳನ್ನು ತೆಗೆದು ಪರಿಶೀಲಿಸಲಾಗಿ 40 ಲೀಟರ್ ಸಾಮರ್ಥ್ಯದ ಒಂದು ಅಲ್ಯುಮಿನಿಯಂ ಪಾತ್ರೆಯಲ್ಲಿ ಸುಮಾರು 20 ಲೀಟರ್ ನಷ್ಟು ಬೆಲ್ಲದ ಕೊಳೆ, ಸುಮಾರು 20 ಲೀಟರ್ ಸಾಮರ್ಥ್ಯದ ರಂಧ್ರವಿರುವ ಅಲ್ಯುಮಿನಿಯಂ ಪಾತ್ರೆ ಅದರೊಳಗೆ ಸುಮಾರು 5 ಲೀಟರ್ ರಂಧ್ರವಿರುವ ಅಲ್ಯುಮಿನಿಯಂ ಪಾತ್ರೆ ಮತ್ತು ಮತ್ತೊಂದು 20 ಲೀಟರ್ ಸಾಮರ್ಥ್ಯವುಳ್ಳ ಅಲ್ಯುಮಿನಿಯಂ ಪಾತ್ರೆಯಲಿಲ ನೀರು ತುಂಬಿರುತ್ತಾರೆ. ನಂತರ ಪಕ್ಕದಲ್ಲೇ ಒಂದು ಪ್ಲಾಸ್ಟಿಕ್ ಚೀಲ ಇದ್ದು, ಸದರಿ ಚೀಲವನ್ನು ಪರಿಶೀಲಿಸಲಾಗಿ, ಸದರಿ ಚೀಲದಲ್ಲಿ ಕಳ್ಳಭಟ್ಟಿ ತಯಾರಿಸಲು ಉಪಯೋಗಿಸುವ ನಾಯಿ ಬೇಲದ ಚಕ್ಕೆ ಇರುತ್ತದೆ. ನಂತರ ಸ್ಥಳದಲ್ಲಿದ್ದ ಮಹಿಳೆಯನ್ನು ಕಳ್ಳಭಟ್ಟಿಯನ್ನು ಏಕೆ ತಯಾರಿಸುತ್ತೀದ್ದೀರಿ ಎಂದು ಕೇಳಲಾಗಿ ಆಕೆಯು ಮಾರಾಟ ಮಾಡಲು ತಯಾರಿಸಿರುತ್ತೇನೆ ಎಂದು ಹೇಳಿರುತ್ತಾರೆ. ನಂತರ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಸುವುದು ಶಿಕ್ಷಾರ್ಹವಾದದ್ದು ಎಂದು ತಿಳಿಸಿರುತ್ತೇವೆ.

ನಂತರ ಸದರಿ ಬೆಲ್ಲದ ಕೊಳೆಯಲ್ಲಿ 1 ಲೀಟರ್ ನ್ನು ಬೇರ್ಪಡಿಸಿ 1 ಲೀಟರ್ ಸಾಮರ್ಥದ ಪ್ಲಾಸ್ಟಿಕ್ ಬಾಟಲ್ ನಲ್ಲಿ ತುಂಬಿಸಿ ಸದರಿ ಬಾಟಲ್ ನ್ನು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲು 218 ಎಂದು ಸೀಲು ಮಾಡಿರುತ್ತೇವೆ. ನಂತರ ಆಕೆಯ ಪೂರ್ಣ ಹೆಸರು ಮತ್ತು ವಿಳಾಸ ಕೇಳಲಾಗಿ ಆಕೆ ತಮ್ಮ ಹೆಸರು ಮಾದೇವಿ ಕೋಂ ಮುನಿಯ, 51 ವರ್ಷ, ಕೊರಮಶೆಟ್ಟಿ ಜನಾಂಗ, ಪುಷ್ಪಾಪುರ ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಗುರುತಿನ ಚೀಟಿಗಳನ್ನು ತಯಾರಿಸಿಕೊಂಡು ಎಲ್ಲರೂ ಸಹಿ ಮಾಡಿ ಪಾತ್ರೆಗಳಿಗೆ, ನಾಯಿಬೇಲದ ಚೆಕ್ಕೆ ಇದ್ದ ಪ್ಲಾಸ್ಟಿಕ್ ಚೀಲಕ್ಕೆ ಹಾಗೂ ರಾಸಾಯನಿಕ ಪರೀಕ್ಷೆಗೆ ಬೇರ್ಪಡಿಸಿದ್ದ ಬಾಟಲ್ ಅಂಟಿಸಿರುತ್ತೇವೆ. ನಂತರ ಮಾದರಿ ಸೀಲಿನ ನಕಲನ್ನು ತಯಾರಿಸಿ ಸದರಿ ದಾಖಲೆಗೂ ಪಂಚರ ಸಹಿಗಳನ್ನು ಪಡೆದುಕೊಂಡಿರುತ್ತೇವೆ. ನಂತರ ಸ್ಥಳದಲ್ಲಿ ದೊರೆತ ವಸ್ತುಗಳನ್ನು ಇಲಾಖಾ ವಶಕ್ಕೆ ಅಮಾನತ್ತುಪಡಿಸಿಕೊಂಡಿರುತ್ತೇವೆ.

ಸಾಕ್ಷಿಗೆ ನಿಪಿ-1ರ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-1ರ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ 1 ಲೀಟರ್ ನ ಸಾಮರ್ಥ್ಯದ ಪ್ಲಾಸ್ಟಿಕ್ ಬಾಟಲ್ ನಲ್ಲಿರುವ ಬೆಲ್ಲದ ಕೊಳೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿರುತ್ತದೆ.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರುಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಪಿ.ಬಿ. ವಕೀಲರಿಂದಃ**

ನಿಪಿ-1 ರಲ್ಲಿ ಮನೆಯ ನಂಬರ್ ಮತ್ತು ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಮನೆಯ ವಿವರಗಳನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ನಾವು ಮನೆಗೆ ಭೇಟಿ ನೀಡಿದಾಗ ಎಷ್ಟು ಜನ ವಾಸವಿದ್ದರು ಎಂಬುದರ ಬಗ್ಗೆಯೂ ನಮೂದಿಸಿರುವುದಿಲ್ಲ ಎಂದರೆ ಸರಿ. ದಾಳಿಯ ಸಮಯದಲ್ಲಿ ನಾವು ಮಹಿಳಾ ಪೇದೆಗಳನ್ನು ಕರೆದುಕೊಂಡು ಹೋಗಿರುವುದಿಲ್ಲ, ಸಾಕ್ಷಿಯು ಮುಂದುವರೆದು ನಮ್ಮ ಉಪ ನಿರೀಕ್ಷಕರಾದ ಚಾಸಾ-1 ರವರು ಮಹಿಳೆ ಎಂದು ನುಡಿಯುತ್ತಾರೆ.

ನಾವು ಸ್ಥ,ಳದಲ್ಲಿ ಅಲ್ಯುಮಿನಿಯಂ ಪಾತ್ರೆಗಳನ್ನು ಜಪ್ತಿ ಮಾಡಿರುತ್ತೇವೆ. ಸದರಿ ಪಾತ್ರೆಗಳು ನ್ಯಾಯಾಲಯದಲ್ಲಿ ಮುಂದೆ ಇರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ಪಾತ್ರೆಗಳನ್ನು ನಾಶಪಡಿಸಲಾಗಿದೆ ಎಂದು ನುಡಿಯುತ್ತಾರೆ. ನಾಯಿ ಬೇಲದ ಚೆಕ್ಕೆ ಇರುವ ಪ್ಲಾಸ್ಟಿಕ್ ಚೀಲ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದನ್ನು ಸಹ ನಾಶಪಡಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಕಳ್ಳಭಟ್ಟಿ ತಯಾರಿಸುತ್ತಿದ್ದ ಒಲೆ ಇದ್ದ ಸ್ಥಳವನ್ನು ಮಹಜರ್ ಮಾಡಿರುವುದಿಲ್ಲ. ಮಹಜರ್ ಕಾಲದಲ್ಲಿ ಖಾಸಗಿ ಸಾಕ್ಷಿಗಳು ಯಾರೂ ಇರಲಿಲ್ಲ. ದಾಳಿ ಮಾಡಿದ ಮನೆಯಲ್ಲಿ ಬೇರೆ ಯಾವುದೇ ವ್ಯಕ್ತಿಗಳ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಗೂ, ಮುದ್ದೆಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಮಹಜರ್ ನ್ನು ಠಾಣೆಯಲ್ಲಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ. 1 ನ್ನು ಪ್ರಕರಣದ ಸಲುವಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.